ಕೃಷ್ಣಮೇಲ್ದಂಡೆ ಯೋಜನೆಯಡಿ ಮುಳುಗಡೆ ಪ್ರದೇಶಗಳಾದ ಕೋಲ್‌ಹಾರ, ನಂದಿ ಸಕ್ಕರೆ ಕಾರ್ಖಾನೆ ಈ ಸ್ಥಳಗಳಲ್ಲಿ ಐ.ಟಿ.ಐ. ತರಬೇತಿ ಕೇಂದ್ರ ಪ್ರಾರಂಭಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 706(218)

ಸದಸ್ಯರ ಹೆಸರು : ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನಬಾಗೇವಾಡಿ)

ಉತ್ತರಿಸುವ ಸಚಿವರು : ಶ್ರೀ ಎ.ಎಂ.ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು)

ಪ್ರಶ್ನೆ

ಅ) ಕೃಷ್ಣ ಮೇಲ್ದಂಡೆ ಯೋಜನೆಯಡಿ ಮುಳುಗಡೆ ಪ್ರದೇಶಗಳಾದ ಕೋಲ್‌ಹಾರ, ನಂದಿ ಸಕ್ಕರೆ ಕಾರ್ಖಾನೆ, ಈ ಎರಡು ಸ್ಥಳಗಳಲ್ಲಿ ಐ.ಟಿ.ಐ. ತರಬೇತಿ ಕೇಂದ್ರ ಪ್ರಾರಂಭಿಸುವ ವಿಚಾರ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳಾವುವು?

ಉತ್ತರ

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಪಡಿತರ ಚೀಟಿಗಾಗಿ ತಯಾರಿಸಲಾಗಿರುವ ಯಾದಿಯಲ್ಲಿ ಕಡುಬಡವರ ಹೆಸರುಗಳು ಬಿಟ್ಟು ಹೋಗಿದ್ದ ಹೆಸರು ಸೇರಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 707(237)

ಸದಸ್ಯರ ಹೆಸರು : ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನಬಾಗೇವಾಡಿ)

ಉತ್ತರಿಸುವ ಸಚಿವರು : ಶ್ರೀ ಡಿ.ಬಿ.ಇನಾಂದಾರ್(ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು)

ಪ್ರಶ್ನೆ

ಅ) ಪಡಿತರ ಚೀಟಿಗಾಗಿ ತಯಾರಿಸಲಾಗಿರುವ ಕಡುಬಡವರ ಯಾದಿಯಲ್ಲಿ

ಬಹಳಷ್ಟು ಕಡುಬಡವರ ಹೆಸರುಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಿಟ್ಟುಹೋದ ಕಡುಬಡವರ ಹೆಸರುಗಳನ್ನು ಈ ಯಾದಿಯಲ್ಲಿ ಸೇರಿಸುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಇ) ಉತ್ತರ ಕರ್ನಾಟಕದ ಪ್ರಮುಖ ಆಹಾರ ಧಾನ್ಯವಾದ ಬಿಳಿ ಜೋಳವನ್ನು ಪಡಿತರ ಚೀಟಿ ಮೂಲಕ ವಿತರಿಸಲು ಸರ್ಕಾರದ ಮುಂದೆ ಪ್ರಸ್ತಾಪ ಇದೆಯೇ?

ಈ) ಎಂದಿನಿಂದ ಈ ಯೋಜನೆಯನ್ನು ಜಾರಿಗೆ ತರಲಾಗುವುದು?

ಉತ್ತರ

ಅ) ದೂರುಗಳು ಸರ್ಕಾರದ ಗಮನಕ್ಕೆ ಬಂದಿವೆ.

ಆ) ಸರ್ಕಾರವು ದಿನಾಂಕ 22.12.01ರಂದು ಆದೇಶ ಹೊರಡಿಸಿ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಜಂಟಿಯಾಗಿ ಮನೆ-ಮನೆ ಸಮೀಕ್ಷೆ ನಡೆಸಿ, ರಾಜ್ಯದಲ್ಲಿರುವ ನೈಜ ಬಿ.ಪಿ.ಎಲ್ ಕುಟುಂಬಗಳನ್ನು ಗುರುತಿಸಲು ಆದೇಶಿಸಿದೆ.

ಇ) ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಪಹಣಿ ಕಂಪ್ಯೂಟರೀಕರಣ ಯೋಜನೆಯನ್ನು ಹೋಬಳಿ ಮಟ್ಟದಲ್ಲಿ ಜಾರಿಗೆ ತರುವುದು

ಚುಕ್ಕೆ ಗುರುತಿಲ್ಲದ LA ಪ್ರಶ್ನೆ ಸಂಖ್ಯೆ : 709(243)

ಸದಸ್ಯರ ಹೆಸರು : ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನಬಾಗೇವಾಡಿ)

ಉತ್ತರಿಸುವ ಸಚಿವರು : ಶ್ರೀ ಹೆಚ್.ಪಿ.ಶ್ರೀಕಂಠಯ್ಯ (ಕಂದಾಯ ಸಚಿವರು)

ಪ್ರಶ್ನೆ

1. ಪಹಣಿ ಪತ್ರಿಕೆಗಳ ಕಂಪ್ಯೂಟರೀಕರಣ ಯೋಜನೆಯನ್ನು ಹೋಬಳಿ ಮಟ್ಟದಲ್ಲಿ